1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳವರ ನ್ಯಾಯಾಲಯ, ಬೆಂಗಳೂರು

ಸಿಸಿ ನಂಃ 3599/2012

ಫಿರ್ಯಾದುದಾರರು : ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆ (ಸಿಸಿಬಿ ವಿಶೇಷ ವಿಚಾರಣ ದಳ ಎನ್.ಟಿ.ಪೇಟೆ) ಬೆಂಗಳೂರು.

ವಿರುದ್ಧ

ಆರೋಪಿಗಳು : 1- ವಿ. ಭಾಸ್ಕರ್‌ರೆಡ್ಡಿ ತಂದೆ ಬಾಲವೆಂಕಟರೆಡ್ಡಿ, ವಯಸ್ಸುಃ- 47 ವರ್ಷ, ವಾಸ ಃ- 01, 4ನೇ ಮೇನ್, ಕುವೆಂಪುನಗರ, ದೊಡ್ಡಕಲ್ಲಸಂದ್ರ, ಬೆಂಗಳೂರು.

2- ತಿರುಮಲ ರಿಪುಂಜಯ ರೆಡ್ಡಿ ಅಲಿಯಾಸ್ ಟಿ.ಆರ್.ರೆಡ್ಡಿ, ತಂದೆ ಲೇಟ್ ಟಿ.ವಿ.ರಾಘವರೆಡ್ಡಿ, ವಯಸ್ಸು ಃ-53 ವರ್ಷ, ವಾಸಃ- ನಂ.1, ವೈಷ್ಣವಿ ಪ್ಯಾರಾಡೈಸ್, 47ನೇ ಕ್ರಾಸ್, ಜಯನಗರ, ಬೆಂಗಳೂರು.

## : ದೋಷಾರೋಪಣೆ :

ಶ್ರೀಮತಿ ಹೇಮಾ ಪ್ರಸ್ತಾಪೂರ., ಬಿ.ಎ., ಎಲ್.ಎಲ್.ಬಿ., 1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ಆರೋಪಿತರಾದ ನೀವುಗಳು ಸಾರ್ವಜನಿಕರಿಗೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಅಕ್ರಮ ಲಾಭಗಳಿಸುವ ಸಮಾನ ಉದ್ದೇಶದಿಂದ ಸನ್ 2006 ರಿಂದ 2009 ನೇ ಸಾಲಿನ ನಡುವೆ ಪ್ರೆಸಿಡೆನ್ಸಿಗ್ರೂಫ್ ಮತ್ತು ಐಶ್ವರ್ಯ ಪ್ರಾಜೆಕ್ಟ್ ಎನ್ನುವ ಹೆಸರಿನಲ್ಲಿ

ನಂ.895 /1, ಸ್ಕಂದ, 14ನೇ ಕ್ರಾಸ್, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು ಮತ್ತು ನಂ.717, ಪೂರ್ಣಶಶಿ ಕಾಂಪ್ಲೆಕ್ಸ್, ಮೋದಿ ರಸ್ತೆ, ಬಸವೇಶ್ವರ ನಗರ, ಬೆಂಗಳೂರು ಮತ್ತು ನಂ.604, ವೈಷ್ಣವಿ ಪ್ಯಾರಡೈಸ್, ಸಂಗಂ ಸರ್ಕಲ್, 8ನೇ ಬ್ಲಾಕ್, ಜಯನಗರ ಬೆಂಗಳೂರು ಇಲ್ಲಿ ಅನಧಿಕೃತವಾಗಿ ನಿಮ್ಮ ಕಚೇರಿಗಳನ್ನು ತೆಗೆದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೂಪರಿವರ್ತನೆಯಾದ ಜಮೀನುಗಳಲ್ಲಿ ಬಡಾವಣೆಗಳನ್ನು ನಿರ್ಮಾಣಮಾಡಿ ಅವುಗಳಲ್ಲಿ ಸೈಟುಗಳನ್ನು ನೀಡುವುದಾಗಿ ನಂಬಿಸಿದ್ದು, ಅದನ್ನು ನಂಬಿದ ಚಾಸಾ-1 ಹಾಗೂ 5 ರಿಂದ 123 ಇವರು ಸದರಿ ನಿವೇಶನಗಳಿಗಾಗಿ ಹಣವನ್ನು ಹೂಡಿಕೆ ಮಾಡಿದ್ದು, ನಂತರದ ದಿನಗಳಲ್ಲಿ ಆರೋಪಿಯಾದ ನೀವು ಸದರಿಯವರಿಗೆ ಯಾವುದೇ ಸೈಟನ್ನು ಕೊಡದೇ ಹಾಗೂ ಹಣವನ್ನು ವಾಪಸ್ಸು ಕೊಡದೇ ಮೋಸ ಮಾಡಿ ಭಾ. ದಂ. ಸಂ. ಕಲಂ 420 ಸಹವಾಚಕ ಕಲಂ 34 ಹಾಗೂ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್ ಕಲಂ 192(ಎ) (5) ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದೂ ಕಂಡು ಬಂದ ಮೇರೆಗೆ ನಿಮ್ಮ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿದೆ ಮತ್ತು ಸದರಿ ಆರೋಪಗಳ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳು,
ಬೆಂಗಳೂರು ನಗರ.

**: ಪ್ಲೀ :**

ಪ್ರಶ್ನೆ.1 ಃ ಮೇಲೆ ವಿವರಿಸಿ ಹೇಳಿದ ನಿಮ್ಮ ಮೇಲಿನ ಆಪಾದನೆಯು ನಿಮಗೆ ಅರ್ಥವಾಯಿತೇ?

ಉತ್ತರ ಃ 1ನೇ ಆರೋಪಿ

2ನೇ ಆರೋಪಿ

ಪ್ರಶ್ನೆ.2 ಃ ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ನಿಮ್ಮ ವಿರುದ್ದ ವಿಚಾರಣೆಯಾಗಬೇಕೊ ?

ಉತ್ತರ ಃ 1ನೇ ಆರೋಪಿ

2ನೇ ಆರೋಪಿ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ ಅವರು ಮೇಲ್ಕಂಡಂತೆ ಒಪ್ಪಿಕೊಂಡಿರುವುದು ಸರಿಯಾಗಿದೆಯೆಂದು ದೃಢೀಕರಿಸುತ್ತೇನೆ.)

1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ.
ಬೆಂಗಳೂರು.